# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 04.02.2014 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| **ಶ್ರೀಯುತರುಗಳಾದ :** | |
| ಡಾ॥ಎಂ.ಎಸ್.ಶಿವಪ್ರಸಾದ್ – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ, |
| ವೀಣಾ ನಾಗರಾಜ್ – ಸದಸ್ಯರು | ಸಹಾಯಕ ನಿಯಂತ್ರಕರು (ಹಣಕಾಸು–ಕೇಂದ್ರ), |
| ಗಂಗಾಧರ ಹೆಚ್.ಎನ್ – ಸದಸ್ಯರು | ಮುಖ್ಯ ಅಭಿಯಂತರರು (ಯೋಜನೆ–2), |
| ಬಿ.ಎಸ್.ಆನಂದ್ – ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಕೆರೆಗಳು–2), (ಬೃಹತ್ ನೀರುಗಾಲುವೆ–ಕೋರಮಂಗಲ ಕಣಿವೆ), |
| ಕೃಷ್ಣ.ವಿ – ಸದಸ್ಯರು | |
| ಸಂಪತ್‌ರಾಜ್.ಆರ್ – ಸದಸ್ಯರು | ಕಿರಿಯ ಅಭಿಯಂತರರು (ಬೃಹತ್ ನೀರುಗಾಲುವೆ), |
| ಗೋವಿಂದರಾಜು.ಎನ್ – ಸದಸ್ಯರು | ಇತರೆ ಸಿಬ್ಬಂಧಿ ವರ್ಗ. |
| ಉದಯ್‌ಕುಮಾರ್.ಆರ್ – ಸದಸ್ಯರು | --- |
| ಸರಳ – ಸದಸ್ಯರು | --- |
| ಸಿ.ಎಸ್.ರಾಧಾಕೃಷ್ಣ – ಸದಸ್ಯರು | --- |
| **ಗೈರು ಹಾಜರಿದ್ದ ಸದಸ್ಯರು** | --- |
| ಎಂ.ಇ.ಪಿಳ್ಳಪ್ಪ – ಸದಸ್ಯರು | --- |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

## *01]. ವಿಷಯದ ಸಂಖ್ಯೆ :–ತೆಆಸ್ಥಾಸ/79/2013–14*

ಆಯುಕ್ತರ ದಿನಾಂಕ : 22.01.2014ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರದ ಆರ್ಥಿಕ ಇಲಾಖೆಯ, ಸರ್ಕಾರದ ಅಧಿನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ಸೇವೆಗಳು–1) ರವರ ಆದೇಶ ಸಂಖ್ಯೆ: ಆಇ 9 ಸೇನಿಸೇ 2013 ಬೆಂಗಳೂರು, ದಿನಾಂಕ 28.11.2013ರ ಆದೇಶದಲ್ಲಿ, 2014ನೇ ಸಾಲಿನ ಅವಧಿಗೆ ಗರಿಷ್ಠ 15 ದಿನಗಳಿಗೆ ಮೀರದ ಗಳಿಕೆ ರಜೆಯನ್ನು ಅಧ್ಯರ್ಪಿಸಿ ರಜಾ ವೇತನಕ್ಕೆ ಸಮನಾದ ನಗದೀಕರಣ ಸೌಲಭ್ಯ ಪಡೆಯುವ ಯೋಜನೆಯನ್ನು 01.01.204ರಿಂದ ಜಾರಿಗೊಳಿಸಿ ಈ ಕೆಳಕಂಡಂತೆ ನಿಯತಗೊಳಿಸರುತ್ತದೆ.

| ಕ್ರಮ ಸಂಖ್ಯೆ | ಅಧಿಕಾರಿ/ನೌಕರರ ಸಮೂಹ | ಮುಂಚಿತವಾಗಿ ಒಂದು ತಿಂಗಳ ನೋಟಿಸ್ ನೀಡಿ 2014ನೇ ಸಾಲಿನ ಅವಧಿಗೆ ನಗದೀಕರಣ ಸೌಲಭ್ಯ ಪಡೆಯುವ ಅವಧಿ |
|---|---|---|
| 1 | ಗ್ರೂಪ್ "ಡಿ "ಸಮೂಹ | ಅವರ ಇಚ್ಛೆಯಂತೆ 2014ರ ಕ್ಯಾಲೆಂಡರ್ ವರ್ಷದ ಯಾವುದೇ ತಿಂಗಳಿನಲ್ಲಿ |
| 2 | ಉಳಿದ ಸಮೂಹ(ಎ.ಬಿ.ಸಿ) | ಅವರ ಇಚ್ಛೆಯಂತೆ ಏಪ್ರಿಲ್ 2014ರಿಂದ ಡಿಸೆಂಬರ್ 2014ರ ವರೆಗಿನ ಯಾವುದೇ ತಿಂಗಳಿನಲ್ಲಿ |

2. ಮೇಲೆ ವಿಧಿಸಿದ ನಿಬಂಧನೆಯು ಏನೇ ಇದ್ದಾಗ್ಯೂ ಜನವರಿಯಿಂದ ಮಾರ್ಚ 2014ರಲ್ಲಿ ನಿವೃತ್ತಿ ಹೊಂದಿದ ಎಲ್ಲಾ ಅರ್ಹ ನೌಕರರು/ಅಧಿಕಾರಿಗಳು, ಅವರು ನಿವೃತ್ತಿ ಹೊಂದುವ ತಿಂಗಳಲ್ಲಿ ನಗದೀಕರಣ ಪ್ರಯೋಜನ ಪಡೆಯಲು ಅರ್ಹರಾಗಿರುತ್ತಾರೆ.

3. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 118 ರಲ್ಲಿ ನಿಯಮಿಸಿರುವಂತಹ ಗಳಿಕೆ ರಜೆ ನಗದೀಕರಣ ನಿಯಂತ್ರಣಕ್ಕೆ ಸಂಬಂಧಿಸಿದ ಇತರೆ ಷರತ್ತುಗಳು ಅನ್ವಯವಾಗುತ್ತದೆ.

4. ಈ ಆದೇಶವು ಈಗಾಗಲೇ ಈ ಸೌಲಭ್ಯ ವಿಸ್ತರಣೆಯಾಗಿರುವ ಸರ್ಕಾರದಿಂದ ಸಹಾಯಾನುದಾನ ಪಡೆಯುತ್ತಿರುವ ಸಂಸ್ಥೆಗಳ ನೌಕರರಿಗೂ ಅನ್ವಯಿಸುತ್ತದೆ.

ಮುಖ್ಯ ಲೆಕ್ಕಾಧಿಕಾರಿಗಳು, ದಿನಾಂಕ 20.01.2014ರ ವರದಿಯಲ್ಲಿ 2014ನೇ ಸಾಲಿನ ಅವಧಿಗೆ ಗಳಿಕೆ ರಜೆಯನ್ನು ಅಧ್ಯರ್ಪಿಸಿ ನಗದೀಕರಣ ಸೌಲಭ್ಯ ಪಡೆಯುವ ಯೋಜನೆಯನ್ನು ದಿನಾಂಕ 01.04.2014ರಿಂದ ಜಾರಿಗೊಳಿಸಿ, ಸರ್ಕಾರದ ಆದೇಶ ಸಂ: ಅ.ಇ 09/ಸೇ.ನಿಸೇ/2013 ಬೆಂಗಳೂರು ದಿನಾಂಕ 28.01.2013ರಂತೆ ಪಾವತಿಸಲು 2014.15ನೇ ಸಾಲಿನ ಆಯವ್ಯಯದಲ್ಲಿ ಸಾಮಾನ್ಯ ಆಡಳಿತ, ವೇತನ ಮತ್ತು ಇತರೆ ವೆಚ್ಚಗಳು ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಮಾನ್ಯ ಆಯುಕ್ತರವರ ಅನುಮೋದನೆಯೊಂದಿಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ತೀರ್ಮಾನಕ್ಕಾಗಿ ಮಂಡಿಸುವ ಬಗ್ಗೆ ಮುಂದಿನ ಕ್ರಮ ವಹಿಸಬಹುದೆಂದು ಅಭಿಪ್ರಾಯ ವರದಿ ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಸರ್ಕಾರದ ಆರ್ಥಿಕ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ಸೇವೆಗಳು–1) ರವರ ಆದೇಶ ಸಂಖ್ಯೆ: ಅಇ 9 ಸೇನಿಸೇ 2013 ಬೆಂಗಳೂರು, ದಿನಾಂಕ 28.11.2013ರ ನಡವಳಿ ಆದೇಶವನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಸಂಬಂಧ, ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ

**<u>ನಿರ್ಣಯ:</u>– ಆಯುಕ್ತರ ದಿ.22.01.2014ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

## ***<u>02]. ವಿಷಯದ ಸಂಖ್ಯೆ :–ತೆಆಸ್ಥಾಸ/80/2013–14</u>***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ : 22.01.2014ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ–160 ರ ರಾಜರಾಜೇಶ್ವರಿ ನಗರ ದ್ವಾರಪ್ರದೇಶದಲ್ಲಿ ವೃಷಭಾವತಿ ಕಣಿವೆಗೆ ಅಡಲಾಗಿ ಸೇತುವೆ ನಿರ್ಮಾಣ ಮತ್ತು ರಸ್ತೆ ಅಗಲಗೊಳಿಸುವ ಕಾಮಗಾರಿಗೆ 2010–11 ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ-133 ಮತ್ತು ಪಿ–ಕೋಡ್ 2297 ರಲ್ಲಿ 100.00 ಲಕ್ಷಗಳ ಅನುದಾನ ಲಭ್ಯತೆ ಮೇರೆಗೆ 160–11–000044 ರಂತೆ ಜಾಬ್ ಸಂಖ್ಯೆ ನೀಡಲಾಗಿರುತ್ತದೆ.

ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:10–02–2011 ರ ನಿರ್ಣಯ ವಿಷಯ ಸಂಖ್ಯೆ: 34/2010–11 ರಲ್ಲಿ 2010–11ರ ಆರ್ಥಿಕ ಸಾಲಿನಲ್ಲಿ ಲಭ್ಯವಿರುವ ರೂ. 100.00ಲಕ್ಷಗಳು ಹಾಗೂ ಬಾಕಿ ರೂ 121.00 ಲಕ್ಷಗಳ ಅನುದಾನವನ್ನು ಮುಂದಿನ ಆರ್ಥಿಕ ಸಾಲಿನಲ್ಲಿ ಅಳವಡಿಸಿಕೊಳಲು ಹಾಗೂ ಕಾಮಗಾರಿಯ ಅಂದಾಜು ಮೊತ್ತ ರೂ 221.00 ಲಕ್ಷಗಳಿಗೆ ಟೆಂಡರ್ ಕೈಗೊಂಡು ಕಾಮಗಾರಿ ನಿರ್ವಹಿಸಲು ಅನುಮೋದಿಸಲಾಗಿರುತ್ತದೆ.

ಮೇಲ್ಕಂಡ ಕಾಮಗಾರಿಗೆ ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಮುಖಾಂತರ ಮೇ|| ಪರಿಚಿತ ಕನ್‌ಸ್ಟ್ರಕ್ಷನ್ಸ್ ರವರಿಗೆ ಮಂಜೂರಾದ ದರಕ್ಕಿಂತ ಶೇ 4.92ರಷ್ಟು ಕಡಿಮೆ ದರದಲ್ಲಿ ಕಾಮಗಾರಿ ನಿರ್ವಹಿಸಲು ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:23–09–2011 ರ ನಿರ್ಣಯ ವಿಷಯ ಸಂಖ್ಯೆ: 100/2011–12 ರಲ್ಲಿ ಅನುಮೋದನೆಯಾಗಿರುತ್ತದೆ.

ಅದರಂತೆ ಕಾಮಗಾರಿಯ ಪಾಯದ ಕೆಲಸವನ್ನು ಕೈಗೊಳ್ಳುವ ಸಂಧರ್ಭದಲ್ಲಿ ಕಾಮಗಾರಿ ಸ್ಥಳಕ್ಕನುಗುಣವಾಗಿ ಪರಿಷ್ಕೃತ ಅಂಶಗಳನ್ನು ಅಳವಡಿಸಿಕೊಂಡು ಕಾಮಗಾರಿ ಕೈಗೊಳ್ಳಬೇಕಾದ್ದರಿಂದ ಕಾಮಗಾರಿಯ ಮೊತ್ತವನ್ನು ರೂ. 268.00 ಲಕ್ಷಗಳಿಗೆ ಪರಿಷ್ಕರಿಸಿ ಸದರಿ ಪರಿಷ್ಕೃತ ಮೊತ್ತಕ್ಕೆ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:24–12–2012 ರ ನಿರ್ಣಯ ವಿಷಯ ಸಂಖ್ಯೆ: 111/2012–13 ರಲ್ಲಿ ಅನುಮೋದನೆ ಪಡೆಯಾಗಿರುತ್ತದೆ.

ಪ್ರಸ್ತುತ ಕಾಮಗಾರಿಯು ಪೂರ್ಣಗೊಳ್ಳುವ ಅಂತಿಮ ಹಂತದಲ್ಲಿದ್ದು, 2013–14ನೇ ಸಾಲಿನ ಆಯವ್ಯಯದಲ್ಲಿ ಪಿ–ಕೋಡ್ 2297ರ ಅಡಿ ಅನುದಾನ ಮೀಸಲಿರಿಸಿರುವುದಿಲ್ಲ, ಆದ್ದರಿಂದ, ಲೆಕ್ಕಶೀರ್ಷಿಕೆ ಪಿ–0577ರ ಅಡಿಯಲ್ಲಿ ರೂ.200.00ಲಕ್ಷಗಳನ್ನು ಮೀಸಲಿಟ್ಟಿದ್ದು, ಇದುವರೆವಿಗೂ ರೂ.164.25 ಉಳಿಕೆ ಇರುತ್ತದೆ ಹಾಗೂ 0543–ವೃಷಭಾವತಿ ಕಣಿವೆ ಲೆಕ್ಕಶೀರ್ಷಿಕೆಯಡಿಯಲ್ಲಿ ರೂ.3.75ಲಕ್ಷ ಮೊತ್ತವನ್ನು ಭರಿಸಬಹುದಾಗಿದ್ದು, ಒಟ್ಟು ಮೊತ್ತ ರೂ. 168.00ಲಕ್ಷಕ್ಕೆ ಮರು ಹೊಂದಾಣಿಕೆ ಮಾಡಿಕೊಳ್ಳಲು ಮತ್ತು ಜಾಬ್ ಸಂಖ್ಯೆ ಪಡೆಯಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**<u>ನಿರ್ಣಯ:</u>– ವಿಶೇಷ ಆಯುಕ್ತರು (ಯೋಜನೆ) ರವರ ದಿ.22.01.2014ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

## *03]. ವಿಷಯದ ಸಂಖ್ಯೆ :–ತೆಆಸ್ಥಾಸ/81/2013–14*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ : 22.01.2014ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ: 115, ವನ್ನಾರ್‌ಪೇಟೆ ವಾರ್ಡಿನಲ್ಲಿನ ಇನ್‌ಫೆಂಟ್ ಜೀಸಸ್ ಚರ್ಚ್ ಪಕ್ಕದಲ್ಲಿ ಹರಿಯುತ್ತಿರುವ ಸೆಕೆಂಡರಿ ಮಳೆ ನೀರುಗಾಲುವೆಯ ಕಲ್ಲು ಕಟ್ಟಡವು ಇತ್ತೀಚೆಗೆ ಬಿದ್ದ ಭಾರಿ ಮಳೆಯಿಂದಾಗಿ ಕುಸಿದು ಹೋಗಿದ್ದರಿಂದ ಕಾರ್ಯಪಾಲಕ ಅಭಿಯಂತರರು ಕೋರಮಗಲ ರವರು ಸದರಿ ಹಾನಿಗೊಳಗಾಗಿದ್ದ ನೀರುಗಾಲುವೆಯನ್ನು ದುರಸ್ಥಿಗೊಳಿಸಲು ಉದ್ದೇಶಿಸಲಾಗಿತ್ತು. ಈ ವಿಷಯಕ್ಕೆ ಸಂಬಂಧಿಸಿದಂತೆ ವನ್ನಾರ್ ಪೇಟೆ ವಾರ್ಡಿನ ಪಾಲಿಕೆ ಸದಸ್ಯರು ಬೃಹತ್ ನೀರುಗಾಲುವೆಯು ಹಾಳಾಗಿದ್ದು, ಮಳೆಗಾಲದಲ್ಲಿ ಮಳೆ ನೀರು ಅಕ್ಕ–ಪಕ್ಕದ ಮನೆಗಳಿಗೆ ನುಗ್ಗಿ ಸಾರ್ವಜನಿಕರಿಗೆ ತೊಂದರೆ ಉಂಟಾಗುವುದಾಗಿ ಹಾಗೂ ಸದರಿ ನೀರುಗಾಲುವೆಯ ಪಕ್ಕದಲ್ಲಿ ಪ್ರಸಿದ್ದವಾದ ಬಾಲ ಯೇಸು ದೇವಾಲಯ (ಚರ್ಚ್) ಇದ್ದು, ಇದು ಬೆಂಗಳೂರಿನ ಪ್ರಸಿದ್ಧವಾದ ಚರ್ಚ್ ಆಗಿದ್ದು, ಸದರಿ ಚರ್ಚಿಗೆ ದಿನಾಲೂ ಇಪ್ಪತ್ತು ಸಾವಿರ ಮಂದಿ ಭೇಟಿ ನೀಡುತ್ತಿದ್ದು, ಸದರಿ ಮಳೆ ನೀರುಗಾಲುವೆಯನ್ನು ಪುನರ್ ನಿರ್ಮಿಸಲು ಹಲವಾರು ಭಾರಿ ಪೂಜ್ಯ ಮಹಾ ಪೌರರು ಹಾಗೂ ಆಯುಕ್ತರಿಗೆ ಮನವಿ ಸಲ್ಲಿಸಿರುತ್ತಾರೆ. ಆದುದರಿಂದ ಮುಖ್ಯ ಅಭಿಯಂತರರು (ಬೃ.ನೀ.ಗಾ) ರವರ ಆದೇಶ ಮೇರೆಗೆ ಆರ್.ಸಿ.ಸಿ ತಡೆಗೋಡೆ ನಿರ್ಮಾಣ ಮಾಡಲು ರೂ 330.00 ಲಕ್ಷಗಳ ಅಂದಾಜು ಪಟ್ಟಿಯನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆ ಹಾಗೂ ಕಾಮಗಾರಿ ಸಂಕೇತ ಪಡೆಯಲು ವಿಶೇಷ ಆಯುಕ್ತರಿಗೆ ಸಲ್ಲಿಸಲಾಗಿತ್ತು. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರು ಕಾಮಗಾರಿಯನ್ನು ತೆಗೆದುಕೊಳ್ಳಲು 2013–14ನೇ ಸಾಲಿನ ಆಯವ್ಯಯದಲ್ಲಿ ಅನುದಾನದ ಲಭ್ಯವಿರುವ ಬಗ್ಗೆ ಮಾಹಿತಿ ನೀಡಲು ಅಪರ ಆಯುಕ್ತರು (ಹಣಕಾಸು) ರವರನ್ನು ಕೋರಿದ್ದರು.

ಅದರಂತೆ ಅಪರ ಆಯುಕ್ತರು (ಹಣಕಾಸು) ರವರು ಲೆಕ್ಕ ಶೀರ್ಷಿಕೆ ಪಿ–0545–ಕೋರಮಂಗಲ ಕಣಿವೆ ಅಡಿಯಲ್ಲಿನ ಚಾಲ್ತಿ ಕಾಮಗಾರಿಗಳ ಅಡಿಯಲ್ಲಿ ರೂ. 125.00 ಕೋಟಿ ಮೊತ್ತವನ್ನು (Lump sum Grants) ಅನುದಾನವನ್ನಾಗಿ ನಿಗಧಿಪಡಿಸಲಾಗಿರುತ್ತದೆ. ಸದರಿ ಲೆಕ್ಕ ಶೀಷಕೆಯಲ್ಲಿ ಒದಗಿಸಿದ (Lump sum Grants) ಅನುದಾನಕ್ಕೆ ಸೀಮಿತಗೊಳಿಸಿ ಕ್ರಿಯಾ ಯೋಜನೆಯನ್ನು ತಯಾರಿಸಿ ನಿಯಮಾನುಸಾರ ಸಂಬಂಧಪಟ್ಟ ಸ್ಥಾಯಿ ಸಮಿತಿ/ಪಾಲಿಕೆ ಸಭೆ/ಸರ್ಕಾರದ ಅನುಮೋದನೆ ಪಡೆಯುವುದು ಅಗತ್ಯವಾಗಿರುವುದಾಗಿ ಅಪರ ಆಯುಕ್ತರು (ಹಣಕಾಸು) ರವರು ಅಭಿಪ್ರಾಯ ನೀಡಿರುತ್ತಾರೆ.

2013–14ನೇ ಸಾಲಿನ JnNURM ಕೋರಮಂಗಲ ಕಣಿವೆ ಪಿ0545 ಅಡಿ ಮೀಸಲಿಟ್ಟಿರುವ ರೂ.125.00 ಕೋಟಿಗಳಲ್ಲಿ ರೂ.3.30 ಕೋಟಿಗಳಿಗೆ ಜಾಬ್‌ಸಂಖ್ಯೆ ನೀಡಲು ಕಂಡಿಕೆ (15) ರಲ್ಲಿ ಮಾನ್ಯ ಆಯುಕ್ತರು ಅನುಮೋದನೆ ನೀಡಿರುತ್ತಾರೆ. ಆದರೆ ಮುಖ್ಯ ಆರ್ಥಿಕ ಅಧಿಕಾರಿ (JnNURM) ರವರು ಕಂಡಿಕೆ (16) ರಲ್ಲಿ JnNURM ಯೋಜನೆಗಳಿಗೆ ಮೀಸಲಿಟ್ಟಿರುವ ಅನುದಾನದ ಲೆಕ್ಕಶೀರ್ಷಿಕೆಯಡಿ ಇತರೆ Non JnNURM ಯೋಜನೆಗಳಿಗೆ ಜಾಬ್ ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ JnNURM

ಕಾಮಗಾರಿಗಳು ಕೋರಮಂಗಲ ಕಣಿವೆ ಪಿ.0545 ಅಡಿ ಮೀಸಲಿಟ್ಟಿರುವ ರೂ. 125.00 ಕೋಟಿಗಳಲ್ಲಿ ರೂ. 3.30 ಕೋಟಿಗಳನ್ನು Non JnNURM ಅನುದಾನ ಕೋರಮಂಗಲ ಪುನರ್ ನವೀಕರಣ ಪಿ2352 ಗೆ ಅನುದಾನ ಮರು ಹೊಂದಾಣಿಕೆ ಮಾಡಿಕೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿ ಅನುಮೋದನೆ ಪಡೆದು ಪಿ2352 ಅಡಿ ಜಾಬ್ ಸಂಖ್ಯೆ ನೀಡಬೇಕಾಗಿದೆ. ಆದುದರಿಂದ ಅನುದಾನ ಮರುಹೊಂದಾಣಿಕೆ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ:– ವಿಶೇಷ ಆಯುಕ್ತರು (ಯೋಜನೆ) ರವರ ದಿ.22.01.2014ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

## *04]. ವಿಷಯದ ಸಂಖ್ಯೆ :–ತೆಆಸ್ಥಾಸ/82/2013–14*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 19.12.2013ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೌರ ಕಾರ್ಮಿಕರು, ಗ್ಯಾಂಗ್‌ಮೆನ್ ಮತ್ತು ನಾಲ್ಕನೆ ದರ್ಜೆ ನೌಕರರ ವಾರ್ಷಿಕ ಆದಾಯ ರೂ.1.00 ಲಕ್ಷದೊಳಗೆ ಇರುವ ಮಕ್ಕಳಿಗೆ, ವೃತ್ತಿ ಶಿಕ್ಷಣ ಹಾಗೂ ಉನ್ನತ ವ್ಯಾಸಂಗ ಮಾಡುವವರಿಗೆ ಪ್ರೋತ್ಸಾಹ ಧನ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸದರಿ ಯೋಜನೆಯಡಿಯಲ್ಲಿ ಗ್ರೂಫ್ 'ಡಿ' ನೌಕರರ ಮಕ್ಕಳು ಪಿ.ಯು.ಸಿ ನಂತರ ಬಯೋಟೆಕ್ನಾಲಜಿ, ಎಂ.ಬಿ.ಬಿ.ಎಸ್/ಬಿ.ಡಿ.ಎಸ್., ಬಿ.ಇ., ಬಿ.ಎಸ್.ಸಿ. ಅಗ್ರಿಕಲ್ಚರ್ ಇತ್ಯಾದಿ ಒಟ್ಟು 27 ಪದವಿ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿದ್ದಲ್ಲಿ ಪಾಲಿಕೆಯ ವತಿಯಿಂದ ಪ್ರೋತ್ಸಾಹ ಧನ ನೀಡಲು ಪ್ರಸ್ತಾವನೆಯನ್ನು ದಿನಾಂಕ 16–05–2007 ರಂದು ಮಾನ್ಯ ಆಡಳಿತಗಾರರಿಗೆ ಸಲ್ಲಿಸಲಾಗಿ, ಮಾನ್ಯ ಆಡಳಿತಗಾರರು ಉಲ್ಲೇಖ (1) ರಂತೆ ಪ್ರಸ್ತಾವನೆಯಲ್ಲಿನ 27 ಪದವಿ ಕೋರ್ಸ್‌ಗಳೊಂದಿಗೆ, I.T.I. Course, Nursing Course, Physiotherapy, Pathology Laboratory Assistant, X-ray Technician Opthalmologist (Refractionist) Technician Courses ಗಳನ್ನು ಅಳವಡಿಸಿಕೊಳ್ಳಲು ಅನುಮೋದನೆ ನೀಡಿರುತ್ತಾರೆ.

2007–2008ನೇ ಸಾಲಿನಲ್ಲಿ 5ನೇ ವೇತನ ಆಯೋಗದ, ಸರ್ಕಾರದ ಆದೇಶದನ್ವಯ, ನೌಕರರ ಮೂಲ ವೇತನ ರೂ.2500–4800, ರೂ.2600–5200 ಮತ್ತು ರೂ.2775–5500 ಗಳಿಗೆ ಪರಿಷ್ಕರಣೆಯಾಗಿದ್ದು, ಪೌರ ಕಾರ್ಮಿಕರು ಹಾಗೂ 4ನೇ ದರ್ಜೆ ನೌಕರರ ವೇತನವು ಸಹ ಹೆಚ್ಚಾಗಿರುವ ಹಿನ್ನೆಲೆಯಲ್ಲಿ, ಈ ಹಿಂದೆ ವಾರ್ಷಿಕ ಆದಾಯ ರೂ.1.00 ಲಕ್ಷದೊಳಗೆ ಇದ್ದ ನೌಕರರ ಮಕ್ಕಳು ಯೋಜನೆಯ ಸದುಪಯೋಗ ಪಡೆಯಲು ಅರ್ಹರಾಗಿದ್ದರು, ಪ್ರಸಕ್ತ ವೇತನ ಹೆಚ್ಚಳದಿಂದ ವಾರ್ಷಿಕ ಆದಾಯ ರೂ.1.50 ಲಕ್ಷದೊಳಗೆ ಇರುವ ನೌಕರರ ಮಕ್ಕಳು ಸಹ ಯೋಜನೆಯ ಪ್ರಯೋಜನೆ ಪಡೆಯಲು ಅರ್ಹರಾಗಿರುತ್ತಾರೆಂಬುದನ್ನು ಮಾನ್ಯ ಆಡಳಿತಗಾರರಿಗೆ ಮಂಡಿಸಲಾಗಿತ್ತು. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಮಾನ್ಯ ಆಡಳಿತಗಾರರು ಉಲ್ಲೇಖ (2) ರಂತೆ ಅನುಮೋದನೆ ನೀಡಿರುತ್ತಾರೆ.

ಶ್ರೀ ಓಬಳೇಶ್, ಪೌರಕಾರ್ಮಿಕರು, ರವರ ಮನವಿ ಮೇರೆಗೆ, ಎಂ.ಬಿ.ಎ ಮತ್ತು ಎಂ.ಎಸ್.ಡಬ್ಲ್ಯು ಕೋರ್ಸ್‌ಗಳಿಗೂ ಸಹಾ ಪ್ರೋತ್ಸಾಹಧನ ನೀಡಲು ಮಾನ್ಯ ಆಡಳಿತಗಾರರು ಉಲ್ಲೇಖ (3)ರಂತೆ ಅನುಮೋದನೆ ನೀಡಿರುತ್ತಾರೆ.

ತದ ನಂತರ, 2009–2010ನೇ ಸಾಲಿನಲ್ಲಿ ಅಪರ ಆಯುಕ್ತರು (ದಕ್ಷಿಣ) ವಲಯ ವ್ಯಾಪ್ತಿಯಲ್ಲಿ ಸದರಿ ಯೋಜನೆಯಡಿಯಲ್ಲಿ ಅರ್ಜಿ ಸಲ್ಲಿಸಿರುವ ಕೆಲವೊಂದು ಪೌರಕಾರ್ಮಿಕರ ಹಾಗೂ ಗ್ರೂಫ್ 'ಡಿ' ನೌಕರರ ವಾರ್ಷಿಕ ಆದಾಯ ಮಿತಿಯು ರೂ.1.50 ಲಕ್ಷಗಳಿಗಿಂತ ಹೆಚ್ಚಾಗಿರುವುದರಿಂದ ಸದರಿ ಯೋಜನೆಯ ವಾರ್ಷಿಕ ಆದಾಯದ ಮಿತಿಯನ್ನು ಹೆಚ್ಚಿಸಲು ಅಥವಾ ರದ್ದುಪಡಿಸಲು ಕೋರಿರುವ ಮೇರೆಗೆ, ಮಾನ್ಯ ಆಡಳಿತಗಾರರು ಉಲ್ಲೇಖ (4) ರಂತೆ ಪೌರ ಕಾರ್ಮಿಕರು, ಗ್ಯಾಂಗ್ ಮೆನ್ ಹಾಗೂ ಗ್ರೂಫ್ 'ಡಿ' ನೌಕರರ ವಾರ್ಷಿಕ ಆದಾಯ ಮಿತಿಯನ್ನು ರೂ.1.50 ಲಕ್ಷಗಳಿಂದ ರೂ.2.00 ಲಕ್ಷಗಳಿಗೆ ಹೆಚ್ಚಿಸಿ ಅನುಮೋದನೆ ನೀಡಿರುತ್ತಾರೆ.

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ವಿಷಯದ ಸಂಖ್ಯೆ : ತೆ & ಆ.ಸ್ಥಾ.ಸ/265/2010–11, ದಿನಾಂಕ: 14.03.2011 ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸಂಖ್ಯೆ: ಸಾ.ನ್ಯಾ.ಸ್ಥಾ.ಸ/79/2010–11, ದಿನಾಂಕ: 08.04.2011(6)ರ ತೀರ್ಮಾನಗಳಂತೆ, ರೂ.2.00 ಲಕ್ಷಗಳ ವಾರ್ಷಿಕ ಆದಾಯ ಮಿತಿಯೊಳಗಿರುವ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಖಾಯಂ ಹಾಗೂ ಶುಚಿಗಾರರ ಮಕ್ಕಳ ವಿದ್ಯಾಭ್ಯಾಸ / ಉನ್ನತ ವ್ಯಾಸಂಗ / ವಿದೇಶದಲ್ಲಿ ಉನ್ನತ ವ್ಯಾಸಂಗಕ್ಕೂ ಸಹ ಪ್ರೋತ್ಸಾಹ ಧನ ನೀಡಲಾಗುತ್ತಿದೆ.

ಅದರಂತೆ, ಪ್ರಸ್ತುತ ರೂ.2.00 ಲಕ್ಷಗಳ ವಾರ್ಷಿಕ ಆದಾಯ ಮಿತಿಯೊಳಗಿರುವ ಪೌರಕಾರ್ಮಿಕರು, ಗ್ಯಾಂಗ್‌ಮೆನ್ ಮತ್ತು ಗ್ರೂಫ್ 'ಡಿ' ನೌಕರರು ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಖಾಯಂ ವಾಹನ ಚಾಲಕರು ಮತ್ತು ಶುಚಿಗಾರರ ಮಕ್ಕಳ ಉನ್ನತ ವ್ಯಾಸಂಗಕ್ಕೆ ಪ್ರೋತ್ಸಾಹ ಧನ ನೀಡಲಾಗುತ್ತಿದೆ.

ಶ್ರೀ ವೆಂಕಟಚಲಪತಿ (ಖಜಾಂಚಿ) ಪೌರಕರ್ಮಿಕರ ಮತ್ತು ಆರೋಗ್ಯ ಗ್ಯಾಂಗ್‌ಮೆನ್‌ಗಳ ಸಂಘ(ರಿ). ಮಹಾನಗರ ಪಾಲಿಕೆ ಮುಖ್ಯ ಕಛೇರಿ ಆವರಣ, ಎನ್.ಆರ್. ವೃತ್ತ, ಬೆಂಗಳೂರು–560002 ಇವರು ಮಾನ್ಯ ಆಯುಕ್ತರು ರವರಿಗೆ ಸಲ್ಲಿಸಿರುವ ಪತ್ರ ಸಂಖ್ಯೆ: 168/13–14, ದಿನಾಂಕ 29.08.2013ರ ಮನವಿಯನ್ನು ತಮ್ಮ ಅವಗಾಹನೆಗೆ ಕಡತದಲ್ಲಿರಿಸಿದೆ.

ಸದರಿ ಮನವಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕೆಲಸ ಮಾಡುತ್ತಿರುವ ಪೌರಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡಲು ರೂ.2.00 ಲಕ್ಷಗಳ ಆದಾಯ ಮಿತಿಯನ್ನು ನಿಗಧಿಗೊಳಿಸಿರುವುದು ತಿಳಿದುಬಂದಿದೆ ಎಂದು ಹಾಗೂ ಈ ರೀತಿ ಆದಾಯ ಮಿತಿಗೊಳಿಸಿದರೆ ಪೌರಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನ ದೊರಕುವುದು ಕಷ್ಟವಾಗುತ್ತದೆ ಎಂದು ತಿಳಿಸಿರುತ್ತಾರೆ. ಪೌರ ಕಾರ್ಮಿಕರ ಹೆಚ್ಚಿನ ಸಂಖ್ಯೆಯ ದಲಿತರೆ ಆಗಿದ್ದು ಇವರಿಗೆ ಬರುವ ವೇತನ ಜೀವನಕ್ಕೆ ಸಾಕಗುತ್ತದೆ. ಮನೆ ಬಾಡಿಗೆ, ಬೆಲೆ ಏರಿಕೆಗಳಿಂದ ಇವರು ಬೆಂಗಳೂರಿನಂತಹ ದುಬಾರಿ ನಗರದಲ್ಲಿ ಜೀವನ ನಡೆಸುವುದು ಕಷ್ಟವಾಗಿದೆ ಎಂದು ತಿಳಿಸಿ, ಪೌರಕಾರ್ಮಿಕರ ಮಕ್ಕಳ ವಿದ್ಯಾರ್ಥಿ ವೇತನಕ್ಕೆ ಯಾವುದೇ ರೀತಿಯ ಆದಾಯ ಮಿತಿಯನ್ನು ವಿಧಿಸಬಾರದೆಂದು ಕೋರಿರುತ್ತಾರೆ.

ಮುಂದುವರೆದು, ಅಪರ ಆಯುಕ್ತರು ಪೂರ್ವ ವಲಯ ರವರು ಕಡತದ ಸಂಖ್ಯೆ:ಕ.ಅ(ಪೂರ್ವ)/ಪಿ.ಆರ್/464/13-14 ರಲ್ಲಿ ಶ್ರೀಮತಿ ರುಕ್ಮಿಣಿ, ಪೌರಕಾಮಿಕರು ಇವರ ಮಗನಾದ ಶ್ರೀ ಸಂಕೇತ್ ಕುಮಾರ್ ರವರು ವಿದೇಶಿ ವಿಶ್ವವಿದ್ಯಾನಿಲಯದಲ್ಲಿ ಉನ್ನತ ವ್ಯಾಸಂಗ ಮಾಡಲು ಪ್ರೋತ್ಸಾಹ ಧನ ಕೋರಿ ಮನವಿ ಸಲ್ಲಿಸಿರುವ ಮೇರೆಗೆ **"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೌರಕಾರ್ಮಿಕರು ಹಾಗೂ ಕಡಿಮೆ ವರಮಾನವುಳ್ಳ ಗ್ರೂಪ್ ಡಿ ನೌಕರರ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಧನ ಸಹಾಯ ಯೋಜನೆ"** ಮಾರ್ಗಸೂಚಿಗಳನ್ನು ಭಾಗಶಃ ಮಾರ್ಪಡಿಸಿ ವಾರ್ಷಿಕ ವೇತನ ಮಿತಿಯನ್ನು ರೂ.2.00 ಲಕ್ಷಗಳಿಂದ ರೂ.3.00 ಲಕ್ಷಗಳಿಗೆ ಹೆಚ್ಚಿಸುವ ಬಗ್ಗೆ ಮಾನ್ಯ ಆಯುಕ್ತರವರ ಅನುಮೋದನೆ ಪಡೆದು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿಯನ್ನು ಮಂಡಿಸಲು ಹಾಗೂ ವಾರ್ಷಿಕ ಆದಾಯದ ಮಿತಿಯನ್ನು ಹೆಚ್ಚಿಸಲು ಮಾನ್ಯ ಆಯುಕ್ತರು ಅನುಮೋದಿಸಿದ್ದಲ್ಲಿ ನಿಯಮಾನುಸಾರ ಪ್ರೋತ್ಸಾಹ ಧನವನ್ನು ಮಂಜೂರು ಮಾಡುವ ಬಗ್ಗೆ ಆದೇಶ ಕೋರಿ ಕಡತ ಮಂಡಿಸಿರುತ್ತಾರೆ.

ಸದರಿಯವರ ಮನವಿಯಲ್ಲಿ ಪೌರಕಾರ್ಮಿಕರಿಗೆ ವಾರ್ಷಿಕ ಆಧಾಯದ ಮಿತಿಗೆ ಮಾತ್ರ ಪ್ರಸ್ತಾಪಿಸಿದ್ದು, ಪೌರಕಾರ್ಮಿಕರಿಗೆ ವಾರ್ಷಿಕ ಆಧಾಯದ ಮಿತಿಗೆ ಹೆಚ್ಚಿಸಿದ್ದಲ್ಲಿ ಗ್ಯಾಂಗ್‌ಮೆನ್ ಮತ್ತು ಇತರೆ "ಡಿ" ಗ್ರೂಪ್ ನೌಕರರಿಗೂ ಹಾಗೂ ಚಾಲಕರು ಮತ್ತು ಶುಚಿಗಾರರ ವಾರ್ಷಿಕ ಆದಾಯದ ಮಿತಿಯನ್ನು ಹೆಚ್ಚಿಸಬೇಕಾಗಿರುತ್ತದೆ.

ಪ್ರಸ್ತುತ ಕರ್ನಾಟಕ ನಾಗರೀಕ ಸೇವಾ (ಪರಿಷ್ಕೃತ ವೇತನ) ನಿಯಮಗಳು 2012ರನ್ವಯ (6ನೇ ವೇತನ ಶ್ರೇಣಿ) 2012-13ನೇ ಸಾಲಿನಿಂದ (ಏಪ್ರಿಲ್-2012) ವೇತನ ಪರಿಷ್ಕರಣೆಯಾಗಿದ್ದು, ಪೌರಕಾರ್ಮಿಕರು, ಗ್ಯಾಂಗ್‌ಮೆನ್ ಮತ್ತು ನಾಲ್ಕನೇ ದರ್ಜೆ ನೌಕರರು ಹಾಗೂ ಚಾಲಕರು ಮತ್ತು ಶುಚಿಗಾರರ ಮೂಲ ವೇತನವು ಸಹಾ ಹೆಚ್ಚಾಗಿದ್ದು ವೇತನ ಶ್ರೇಣಿ ಈ ಕೆಳಕಂಡಂತಿರುತ್ತದೆ.

| | |
|---|---|
| 1 | ರೂ.9600-200-12000-250-13000-300-14200-350-14550. |
| 2 | ರೂ.10400-200-12000-250-13000-300-14200-350-15600-400-16400. |
| 3 | ರೂ.11000-200-12000-250-13000-300-14200-350-156000-400-17200-450-19000 |
| 4 | ರೂ.11600-200-12000-250-13000-300-14200-350-156000-400-17200-450-19000-500-21000 |

ಈ ಹಿನ್ನೆಲೆಯಲ್ಲಿ ಸದರಿ ಯೋಜನೆಯಡಿಯಲ್ಲಿ ನಿಗಧಿಪಡಿಸಿರುವ ಪೌರಕಾರ್ಮಿಕರು, ಗ್ಯಾಂಗ್‌ಮೆನ್ ಮತ್ತು ನಾಲ್ಕನೇ ದರ್ಜೆ ನೌಕರರು ಹಾಗೂ ಚಾಲಕರು ಮತ್ತು ಶುಚಿಗಾರರ ನೌಕರರ ವಾರ್ಷಿಕ ವೇತನದ ಮಿತಿಯನ್ನು ರೂ.2.00 ಲಕ್ಷಗಳಿಂದ ರೂ.2.50 ಲಕ್ಷಗಳಿಗೆ ಹೆಚ್ಚಿಸಿ ನಿಗಧಿಪಡಿಸುವುದು ಸಮಂಜಸವಾಗಿರುತ್ತದೆ.

ತತ್ಸಂಬಂಧವಾಗಿ ಈ ಮೇಲ್ಕಂಡ ಅಂಶಗಳನ್ನು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಆಧ್ಯ ಗಮನಕ್ಕೆ ತರುತ್ತಾ, ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವಂತೆ, ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 19.12.2013ರ ಟಿಪ್ಪಣಿಯನ್ನು ಒಪ್ಪಲು ತೀರ್ಮಾನಿಸಿರುವ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ನಿರ್ಣಯ.

**ನಿರ್ಣಯ:- ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿ. 18.01.2014ರ ನಿರ್ಣಯವನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

## *05]. ವಿಷಯದ ಸಂಖ್ಯೆ :-ತೆಆಸ್ಥಾಸ/83/2013-14*

ಆಯುಕ್ತರ ದಿನಾಂಕ: 13.01.2014ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮೇಲ್ಕಂಡ ವಿಷಯ ಕುರಿತು ವ್ಯವಸ್ಥಾಪಕ ನಿರ್ದೇಶಕರು, ಕೆ.ಸಿ.ಡಿ.ಸಿ ಸಂಸ್ಥೆಯವರು ಉಲ್ಲೇಖದಲ್ಲಿರುವ ಪತ್ರದಲ್ಲಿ ತಾವು ತಮ್ಮ ಘಟಕದಲ್ಲಿ ಬೇರ್ಪಡಿಸಿದ

ಹಸಿತ್ಯಾಜ್ಯವನ್ನು ಬಿ.ಬಿ.ಎಂ.ಪಿ. ವತಿಯಿಂದ ಸ್ವೀಕರಿಸಲಾಗುತ್ತಿದ್ದು ಹಾಗೂ ಹಳೆಯ ಶೇಖರಣೆಯಾಗಿರುವ ಘನತ್ಯಾಜ್ಯವನ್ನು ಸಹ ಸಂಸ್ಕರಿಸುತ್ತಿರುತ್ತಾರೆಂದು ವರದಿ ಮಾಡಿರುತ್ತಾರೆ. ಹೊಸ ಘನತ್ಯಾಜ್ಯವು ಬಹಳಷ್ಟು ಪರಿಮಾಣದಾಗಿದ್ದು, ಇದನ್ನು ಸೂಕ್ತವಾಗಿ ಸಂಸ್ಕರಿಸದಿದ್ದರೆ ಹೆಚ್ಚಿನ ಜಾಗ ಬೇಕಾಗಿರುತ್ತದೆಂದು ಹಾಗೂ ಈ ಸ್ವೀಕರಿಸುವ ಘನತ್ಯಾಜ್ಯದ ಪರಿಮಾಣವನ್ನು ತುಂಡು ಮಾಡಿ ಕಡಿಮೆಗೊಳಿಸಲು ಅನುಕೂಲವಾಗುವಂತೆ ಇದನ್ನು ಶ್ರೆಡ್ಡಿಂಗ್ ಮಾಡುವುದು ಅತೀ ಅವಶ್ಯಕವಾಗಿರುತ್ತದೆಂದು ಹಾಗೂ ಈ ಕಾರ್ಯದ ನಂತರ ಕೆ.ಸಿ.ಡಿ.ಸಿ. ಸಂಸ್ಥೆಯವರು 200 ಟನ್ ಪ್ರತಿ ದಿನಕ್ಕೆ ಘನತ್ಯಾಜ್ಯ ಪಡೆಯುವುದಾಗಿ ವರದಿ ಮಾಡಿರುತ್ತಾರೆ.

ವ್ಯವಸ್ಥಾಪಕ ನಿರ್ದೇಶಕರು, ಕೆ.ಸಿ.ಡಿ.ಸಿ. ರವರ ಕೋರಿಕೆಯಂತೆ ಬಿ.ಬಿ.ಎಂ.ಪಿ. ವತಿಯಿಂದ SHREDDERS ಯಂತ್ರೋಪಕರಣ and Hitachi ಯಂತ್ರವನ್ನು ಘನತ್ಯಾಜ್ಯವನ್ನು ಸ್ಥಳಾಂತರಿಸಲು ಖರೀದಿಸಲು ದಿನಾಂಕ:03.12.2013. ರಂದು ರೂ 80.00 ಲಕ್ಷಗಳನ್ನು ನೀಡಲಾಗಿರುತ್ತದೆ. ಇದರಿಂದಾಗಿ ಬೇರ್ಪಡಿಸಿದ ಹಸಿ ತ್ಯಾಜ್ಯವನ್ನು ಸ್ವೀಕರಿಸಲು ಹಾಗೂ ಪ್ರತಿದಿನ 200 ಟನ್‌ನಿಂದ 400 ಟನ್ ರವರೆಗೆ ಹಳೆಯ ಘನತ್ಯಾಜ್ಯವನ್ನು ಸಂಸ್ಕರಿಸಲು ಅನುಕೂಲವಾಗುತ್ತದೆ.

ವ್ಯವಸ್ಥಾಪಕ ನಿರ್ದೇಶಕರು, ಕೆ.ಸಿ.ಡಿ.ಸಿ. ನಿಯಮಿತ ರವರು ತಮ್ಮ ಪತ್ರದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕೋರುತ್ತಾ, ಬಿ.ಬಿ.ಎಂ.ಪಿ. ವತಿಯಿಂದ ಈ ಸೌಕರ್ಯಗಳನ್ನು ಒದಗಿಸಿ ಕೊಟ್ಟಲ್ಲಿ, ಕೆ.ಸಿ.ಡಿ.ಸಿ. ಸಂಸ್ಥೆಯಲ್ಲಿ ಹೆಚ್ಚುವರಿ ಘನತ್ಯಾಜ್ಯವನ್ನು ಸ್ವೀಕರಿಸಲು ಅನುಕೂಲವಾಗುತ್ತದೆಂದು ತಿಳಿಸಿರುತ್ತಾರೆ.

| | | |
|---|---|---|
| 1 | Providing Rs.75.00 Lakhs. GRANT-IN-AID for purchase of a SHREDDERS and engaging Hitachi 200 for shifting the accumulated old un-segregated garbage amounting to Rs.5.00 Lakhs. | 80,00,000 |

ಕೆ.ಸಿ.ಡಿ.ಸಿ. ಸಂಸ್ಥೆಯವರು ಕೋರಿರುವಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ, ಈ ಯಂತ್ರೋಪಕರಣ ಖರೀದಿಸಲು ರೂ 80.00 ಲಕ್ಷಗಳಿಗಳನ್ನು ಅನುಮೋದನೆ ನಿರೀಕ್ಷಿಸಿ ಪಾವತಿಸಿರುವ ಕ್ರಮವನ್ನು ಸ್ಥಿರಿಕರಿಸಲು ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ:– ಆಯುಕ್ತರ ದಿ.13.01.2014ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

## *06]. ವಿಷಯದ ಸಂಖ್ಯೆ :–ತೆಆಸ್ಥಾಸ/84/2013–14*

ಆಯುಕ್ತರ ದಿನಾಂಕ: 27.01.2014ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪೂಜ್ಯ ಮಹಾಪೌರರ 2013–14ನೇ ಸಾಲಿನ ಆಯವ್ಯಯದ ಹಲವಾರು ಲೆಕ್ಕ ಶೀರ್ಷಿಕೆಗಳಲ್ಲಿ ಮೀಸಲಿರಿಸಿರುವ ಅನುದಾನವು ಅಗತ್ಯಕ್ಕಿಂತ ಹೆಚ್ಚಾಗಿರುವುದು ಕಂಡುಬಂದಿದ್ದು ಪೂಜ್ಯ ಮಹಾಪೌರರು ಆಜ್ಞೆ ಮಾಡುವ ವಿಸೇಷ ಕಾಮಗಾರಿಗಳ ಲೆಕ್ಕ ಶೀರ್ಷಿಕೆಯಲ್ಲಿ ನೀಡಿರುವ ಅನುದಾನಕ್ಕಿಂತ ಹೆಚ್ಚಿನ ಬೇಡಿಕೆ ಇರುತ್ತದೆಂದು ಮೇಲ್ಕಂಡಂತೆ ಕೋರಿರುವ ಅಗತ್ಯಕ್ಕಿಂತ ಹೆಚ್ಚಿನ ಅನುದಾನವನ್ನು ಲೆಕ್ಕ ಶೀರ್ಷಿಕೆ ಪಿ0190–ಪೂಜ್ಯ ಮಹಾಪೌರರು ಆಜ್ಞೆ ಮಾಡುವ ವಿಶೇಷ ಕಾಮಗಾರಿಗಳ ಅನುದಾನಕ್ಕೆ ಒಟ್ಟು ರೂ.100.00 ಕೋಟಿಗಳನ್ನು ಪುನರ್‌ವಿನಿಯೋಗಿಸಲು ಕೋರಿರುತ್ತಾರೆ.

2013–14ನೇ ಸಾಲಿನ ಆಯವ್ಯಯದ ವಿವಿಧ ಲೆಕ್ಕ ಶೀರ್ಷಿಕೆಗಳ ಎದುರಿಗೆ **ಪೂಜ್ಯ ಮಹಾಪೌರರ ಪತ್ರ ಸಂಖ್ಯೆ ಎಂ.ಪಿ.ಎಸ್/ಪಿ.ಆರ್/1599/2013–14 ದಿನಾಂಕ 7–12–2013**ರ ಪತ್ರದಲ್ಲಿ ನಮೂದಿಸಿದ ಉಳಿತಾಯಗಳು ಹಾಗೂ ಹೆಚ್ಚುವರಿ ಹಣದ ಅಗತ್ಯತೆ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಂದ ಸಮರ್ಥನೆ ಪಡೆಯುವುದು ಸಮಂಜಸವಾಗಿರುತ್ತದೆ.

ಡಿಸೆಂಬರ್ 2013 ಮತ್ತು ಜನವರಿ 2014 ಮಾಹೆಯಲ್ಲಿ ಆಗಬಹುದಾದ ವೆಚ್ಚಗಳು ಹಾಗೂ ಉಳಿತಾಯದ ಹಣದ ವಿವರಗಳು ಸಂಬಂಧಪಟ್ಟ ನಿಯಂತ್ರಣಾಧಿಕಾರಿಗಳಿಂದ ಪಡೆದು ಪುನರ್ ವಿನಿಯೋಗದ ಪ್ರಸ್ತಾವನೆಯನ್ನು ಪರಿಶೀಲಿಸುವುದು ಸೂಕ್ತವಾಗಿದ್ದು, ಕೆಲವೊಂದು ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ಗುರುತಿಸಲಾದ ಉಳಿಕೆಯು ಅಷ್ಟು ಆಗುತ್ತಿಲ್ಲ. ಹಾಗೂ ವೆಚ್ಚಗಳು ಹೆಚ್ಚಾದ ಕಾರಣ ಹಣದ ಲಭ್ಯತೆ ಕಡಿಮೆ ಇರುತ್ತದೆ. ಈ ಹಿನ್ನೆಲೆಯಲ್ಲಿ 1976ರ ಕೆ.ಎಂ.ಸಿ ಕಾಯ್ದೆ ಮತ್ತು ಕರ್ನಾಟಕ ಆರ್ಥಿಕ ಸಂಹಿತೆಯಲ್ಲಿನ ಕೆಳಕಂಡ ಮಾನದಂಡಗಳನ್ನು ಅನುಸರಿಸಬೇಕಾಗಿರುತ್ತದೆ:

**1. ಕರ್ನಾಟಕ ಮುನಿಸಿಪಲ್ ಕಾಯಿದೆ 172 ರಂತೆ:**

**Reduction or transfer of budget grants:**

(1) The standing committee for (taxation, finance and appeals), (or as the case may be standing committee for taxation and finance) may if it thinks necessary at any time during the year,

a) reduce the amount of a budget grant or
b) transfer and add the amount or a portion of the amount of one budget grant to the amount of any other budget grant;

**Provided that;**

i) Due regard shall be had, when making any such reduction or transfer to all the requirements of this Act.
ii) the aggregate sum of the budget grants contained in the budget estimate adopted by the corporation shall not be increased except by the corporation under section 171.

**Every such reduction or transfer shall be brought to the notice of the corporation at its next meeting.**

(2) If any such reduction or transfer is of an amount exceeding rupees five hundred, the corporation may pass with regard thereto such order as it thinks fit, and it shall be incumbent on the standing committee and the Commissioner to give effect to the said order.

2. **ಕರ್ನಾಟಕ ಆರ್ಥಿಕ ಸಂಹಿತೆಯ** ಅನುಚ್ಛೇದ 308 ರಿಂದ 314ರ ವರೆಗಿನ ಪುನರ್ ವಿನಿಯೋದ ತತ್ವ ಸೂತ್ರಗಳನ್ನು ಗುರುತಿಸಲಾಗಿದೆ. ವೇತನ ಉಳಿತಾಯವನ್ನು ವೇತನೇತರ ಬಾಬ್ತಿಗೆ ಬಳಸಲು ಅವಕಾಶವಿರುವುದಿಲ್ಲ.
3. ವೇತನಕ್ಕಾಗಿ ನಿಗಧಿತ ವೆಚ್ಚವನ್ನು ವೇತನೇತರ ವೆಚ್ಚಗಳಿಗೆ ಹೊಂದಾಣಿಕೆ ಮಾಡುವಂತಿಲ್ಲ.
4. ಆಡಳಿತಾತ್ಮಕ ವೆಚ್ಚವನ್ನು ವಾರ್ಡ್‌ವಾರು ಹಂಚಿಕೆ ಮಾಡತಕ್ಕದ್ದಲ್ಲ.
5. ನಿಗಧಿತ ಕಾಮಗಾರಿ ಮೊತ್ತವನ್ನು ಮತ್ತೊಂದು ಕಾಮಗಾರಿಗಿ ಮರು ಹೊಂದಾಣಿಕೆ ಮಾಡುವಲ್ಲಿ ಕಾಮಗಾರಿಯ ಸಂಬಂಧಿತರಿಂದ ಸಮರ್ಥನೀಯ ಟಿಪ್ಪಣಿ ಇರಬೇಕು.
6. 2013–14ನೇ ಸಾಲಿನ ಆಯವ್ಯಯವನ್ನು ಸರ್ಕಾರದ ಅನುಮೋದನೆಗೆ ಮಂಡಿಸಿದ್ದ ಸಂದರ್ಭದಲ್ಲಿ ಸರ್ಕಾರವು ತನ್ನ ಅನುಮೋದನೆಯ ಆದೇಶದ ಸಂಖ್ಯೆ : ನಅಇ 191 ಎಂಎನ್‌ಯು 2013, ದಿನಾಕ: 05.09.2013ರಲ್ಲಿ ಪೂಜ್ಯ ಮಹಾಪೌರರು ಆಜ್ಞೆ ಮಾಡುವ ವಿಶೇಷ ಕಾಮಗಾರಿಗಳಿಗೆ ನಿಗಧಿ ಪಡಿಸಲಾಗಿದ್ದ ಮೊತ್ತವನ್ನು ರೂ.150.00 ಕೋಟಿ ಮೊತ್ತದವರೆಗೆ ರೂ. 50.00 ಕೋಟಿ ಮೊತ್ತಕ್ಕೆ ಸೀಮಿತಗೊಳಿಸಲಾಗಿರುತ್ತದೆ.
7. ಪ್ರಸ್ತುತ ಸಾಲಿನಲ್ಲಿ ಪಾಲಿಕೆಯು ತೆರಿಗೆ ಸಂಗ್ರಹಣೆಯಲ್ಲಿ ಹಿನ್ನಡೆ ಸಾಧಿಸಿದ್ದು ಸಂಪನ್ಮೂಲಗಳ ಕ್ರೋಢೀಕರಣ ಸಮಸ್ಯೆಯನ್ನು ಎದುರಿಸುತ್ತಿದ್ದು, ಪ್ರಸ್ತುತ ಆರ್ಥಿಕ ಪರಿಸ್ಥಿತಿ ಸದೃಢವಾಗಿರುವುದಿಲ್ಲ.

   1. ಕಛೇರಿ ವೆಚ್ಚ ಹಾಗೂ ಆಡಳಿತ ವೆಚ್ಚದ ಉಳಿಕೆಯನ್ನು ಕಾಮಗಾರಿಗಳಿಗೆ ಬಳಸಲು ಅವಕಾಶವಿರುವುದಿಲ್ಲ.
   2. ಯೋಜನೆ ಶೀರ್ಷಿಕೆಗಳ ವೆಚ್ಚವನ್ನು ಯೋಜನೇತರ ಶೀರ್ಷಿಕೆಗಳ ಅಡಿಯಲ್ಲಿ ಬಳಸಲು ಅವಕಾಶವಿರುವುದಿಲ್ಲ. ಹಾಗೂ ತದ್ವಿರುದ್ಧ.
   3. ಕಾಮಗಾರಿಗೆ ಹಣವನ್ನು ಯೋಜನೆ ಹಾಗೂ ಯೋಜನೇತರ ಅನುದಾನವನ್ನು ಆಯಾ ವಿಭಾಗದ ಕಾಮಗಾರಿಗಳಿಗೆ ಬಳಸತಕ್ಕದ್ದು.
   4. ಬಂಡವಾಳ ವೆಚ್ಚವನ್ನು ಕಂದಾಯ ಶೀರ್ಷಿಕೆಗೆ ಬಳಸಲು ಅವಕಾಶವಿರುವುದಿಲ್ಲ.
   5. ಭೌತಿಕವಾಗಿ ಪುನರ್ ವಿನಿಯೋಗಕ್ಕೆ ಬೇಕಾದ ಹಣ ಅನುದಾನ ಲಭ್ಯವಿಲ್ಲ.

**ಪೂಜ್ಯ ಮಹಾಪೌರರು ಪ್ರಸ್ತಾಪಿಸಿರುವ ಲೆಕ್ಕ ಶೀರ್ಷಿಕೆಯ ವಿವರಗಳು ಕೆಳಕಂಡಂತಿರುತ್ತದೆ.**

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಪಿ ಕೋ ಡ್ | ಪ್ರಧಾನ ಶೀರ್ಷಿಕೆ | ಲೆಕ್ಕ ಶೀರ್ಷಿಕೆ | ಅನುದಾನದ ಮೊತ್ತ | ಪೂಜ್ಯ ಮಹಾಪೌರರು ಆಜ್ಞೆ ಮಾಡುವ ವಿಶೇಷ ಕಾಮಗಾರಿಗಳಿಗೆ ವರ್ಗಾವಣೆ. |
|---|---|---|---|---|---|
| 1 | 2620 | 02. ಸಾಮಾನ್ಯ ಆಡಳಿತ | ಇ–ಆಡಳಿತ ಅನುಷ್ಠಾನ | 500.00 | 300.00 |

| | | | | | |
|---|---|---|---|---|---|
| 2 | 2621 | 02. ಸಾಮಾನ್ಯ ಆಡಳಿತ | ನಾಗರೀಕ ಕುಂದು ಕೊರೆತೆಗಳ ನಿರ್ವಹಣೆ ವ್ಯವಸ್ಥೆಯನ್ನು ಬಲಪಡಿಸುವುದು | 100.00 | 100.00 |
| 3 | 0110 | 02. ಸಾಮಾನ್ಯ ಆಡಳಿತ | ಪ್ರಹರಿ ಇತರೆ ವಾಹನ ಖರೀದಿ | 100.00 | 100.00 |
| 4 | 2646 | 02. ಸಾರ್ವಜನಿಕ ಸಂಪರ್ಕ ಶಾಖೆ | ಜಾಹೀರಾತು ವೆಚ್ಚಗಳು | 1000.00 | 300.00 |
| 5 | 0314 | 12. ನಗರ ವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆ | ರಸ್ತೆ ಬದಿಯಲ್ಲಿ ಗಿಡಗಳನ್ನು ನೆಡುವುದು, ಮರಗಳ ಗಣತಿ ಮತ್ತು ಸಂಖ್ಯೆಗಳನ್ನು ನೀಡುವುದು | 1000.00 | 500.00 |
| 6 | 1701 | 12. ನಗರ ವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆ | ಮರ ಛಾವಣಿ ನಿರ್ವಹಣೆ | 500.00 | 300.00 |
| 7 | 0979 | 13. ಆರೋಗ್ಯ – ಸಾಮಾನ್ಯ | ಆಸ್ಪತ್ರೆ – ಔಷಧಾಲಯಗಳ ನಿರ್ವಹಣೆ–ದುರಸ್ಥಿ | 200.00 | 100.00 |
| 8 | 0462 | 17. ಕಾಮಗಾರಿ ಸಾರ್ವಜನಿಕ ಕಾಮಗಾರಿಗಳು | ಬೃ.ಬೆ.ಮ.ಪಾ ಕಟ್ಟಡಗಳ ನಿರ್ವಹಣೆ ಮತ್ತು ದುರಸ್ಥಿ | 200.00 | 100.00 |
| 9 | 0475 | 17. ಕಾಮಗಾರಿ ಸಾರ್ವಜನಿಕ ಕಾಮಗಾರಿಗಳು | ವಿದ್ಯಾ ಇಲಾಖೆಯ ಕಟ್ಟಡಗಳ ನಿರ್ವಹಣೆ ಮತ್ತು ದುರಸ್ಥಿ | 200.00 | 100.00 |
| 10 | 1771 | 17. ಕಾಮಗಾರಿ ಸಾರ್ವಜನಿಕ ಕಾಮಗಾರಿಗಳು | ವಲಯ ಕಾಮಗಾರಿ | 49400.00 | 3200.00 |
| 11 | 1802 | 17. ಕಾಮಗಾರಿ ಸಾರ್ವಜನಿಕ ಕಾಮಗಾರಿಗಳು | ನೀರು ಸರಬರಾಜು ಹೊಸ ಮತ್ತು ಹಳೆ ಪ್ರದೇಶಗಳಲ್ಲಿ (ರೂ.25 ಲಕ್ಷ ಹಳೆವಾರ್ಡ್‌ಗಳಿಗೆ ಹಾಗೂ ರೂ. 50 ಲಕ್ಷ ಹೊಸ ವಾರ್ಡ್‌ಗಳಿಗೆ) | 7400.00 | 600.00 |
| 12 | 1237 | 17. ಕಾಮಗಾರಿ ಸಾರ್ವಜನಿಕ ಕಾಮಗಾರಿಗಳು | ಪ್ರಕೃತಿ ವಿಕೋಪದ ಕಾಮಗಾರಿಗಳು | 500.00 | 400.00 |
| 13 | 0099 | 19. ಕಾಮಗಾರಿ ಯೋಜನಾ ಶಾಖೆ | ಸಮಾಲೋಚನಾ ವೆಚ್ಚ (ಯೋಜನಾಡಳಿತ) | 100.00 | 100.00 |
| 14 | 1924 | 19. ಕಾಮಗಾರಿ ಯೋಜನಾ ಶಾಖೆ | ರಸ್ತೆ ಮತ್ತು ಮೇಲ್ಸೇತುವೆ ನಿರ್ವಹಣೆ | 2000.00 | 1000.00 |
| 15 | 2969 | 19. ಕಾಮಗಾರಿ ಯೋಜನಾ ಶಾಖೆ | ರಿಂಗ್ ರಸ್ತೆ ಯಿಂದ ವಿದ್ಯಾಪೀಠದ ವರೆಗೆ ರಸ್ತೆ ಅಗಲೀಕರಣ ಕಾಮಗಾರಿ | 500.00 | 200.00 |
| 16 | 2903 | 20. ಕಾಮಗಾರಿ ಮೂಲಭೂತ ಸೌಕರ್ಯಗಳ ಶಾಖೆ | 8 ವಲಯಗಳಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲು ಯಂತ್ರವನ್ನು ಖರೀದಿಸುವುದು | 1000.00 | 500.00 |
| 17 | 2902 | 20. ಕಾಮಗಾರಿ ಮೂಲಭೂತ ಸೌಕರ್ಯಗಳ ಶಾಖೆ | ಆರ್ಟರಿಯಲ್ /ಸಬ್ ಆರ್ಟರಿಯಲ್ ರಸ್ತೆಗಳನ್ನು 8 ವಲಯಗಳಲ್ಲಿ ರಸ್ತೆ ಮೂಲಭೂತ ಸೌಕರ್ಯ ಯೋಜನಾ ವಲಯದಿಂದ ಅಭಿವೃದ್ಧಿಗೊಳಿಸುವುದು. | 1000.00 | 500.00 |
| 18 | 2019 | 20. ಕಾಮಗಾರಿ ಮೂಲಭೂತ ಸೌಕರ್ಯಗಳ ಶಾಖೆ | ಮುಖ್ಯರಸ್ತೆ/ಆರ್ಟರಿಯಲ್/ ಸಬ್ಆರ್ಟರಿಯಲ್ ರಸ್ತೆ, ಮುಖ್ಯರಸ್ತೆಗಳ ವಿಭಾಗ | 4000.00 | 1000.00 |
| 19 | 3033 | 20. ಕಾಮಗಾರಿ ಮೂಲಭೂತ ಸೌಕರ್ಯಗಳ ಶಾಖೆ | ಸರ್ಜಾಪುರ ರಸ್ತೆ ಅಗಲೀಕರಣ | 1000.00 | 100.00 |
| 20 | 0048 | 24. ಸಂಸ್ಕೃತಿ ಮತ್ತು ಕ್ರೀಡೆ | ಕೊಡುಗೆಗಳು ಮತ್ತು ಸಹಾಯ ಧನ | 1000.00 | 500.00 |
| | | | | ಒಟ್ಟು ರೂ. | 10,000.00 |

**ಮೇಲ್ಕಂಡ ವಿಷಯದ ಬಗ್ಗೆ ದಿನಾಂಕ 21–12–2013 ರಂದು ಐ.ಪಿ.ಪಿ. ಸಭಾಂಗಣದಲ್ಲಿ ಮಾನ್ಯ ಆಯುಕ್ತರವರೊಂದಿಗೆ ಚರ್ಚಿಸಿದಂತೆ ಹಾಗೂ ನಿಯಮಾನುಸಾರ ಕಡತವನ್ನು ಪರಿಶೀಲಿಸಿ ಪುನರ್ ವಿನಿಯೋಗ ಪ್ರಕ್ರಿಯೆಯಿಂದ ಈ ಕೆಳಕಂಡ ಲೆಕ್ಕ ಶೀರ್ಷಿಕೆಗಳ ಆಡಳಿತಾತ್ಮಕ ವೆಚ್ಚಗಳು ಮತ್ತು ನಿರ್ವಹಣಾ ಕಾಮಗಾರಿಗಳಿಗೆ ಮೀಸಲಿರಿಸಿದ ಅನುದಾನದ ಕೋರಿಕೆಯ ಪ್ರಸ್ತಾವನೆಯನ್ನು ಕೈಬಿಡಲಾಗಿದೆ.**

| ಕ್ರ. ಸಂ | ಪಿ ಕೋಡ್ | ಪ್ರಧಾನ ಶೀರ್ಷಿಕೆ | ಲೆಕ್ಕ ಶೀರ್ಷಿಕೆ | ಅನುದಾನದ ಮೊತ್ತ | ಪೂಜ್ಯ ಮಹಾಪೌರರು ವರ್ಗಾವಣೆಗೆ ಕೋರಿರುವ ಮೊತ್ತ |
|---|---|---|---|---|---|
| 1 | 2620 | 02. ಸಾಮಾನ್ಯ ಆಡಳಿತ | ಇ–ಆಡಳಿತ ಅನುಷ್ಟಾನ | 500.00 | 300.00 |
| 2 | 2621 | 02. ಸಾಮಾನ್ಯ ಆಡಳಿತ | ನಾಗರೀಕ ಕುಂದು ಕೊರತೆಗಳ ನಿರ್ವಾಹಣೆ ವ್ಯವಸ್ಥೆಯನ್ನು ಬಲಪಡಿಸುವುದು | 100.00 | 100.00 |
| 3 | 0110 | 02. ಸಾಮಾನ್ಯ ಆಡಳಿತ | ಪ್ರಹರಿ ಇತರೆ ವಾಹನ ಖರೀದಿ | 100.00 | 100.00 |
| 4 | 2646 | 02. ಸಾರ್ವಜನಿಕ ಸಂಪರ್ಕ ಶಾಖೆ | ಜಾಹೀರಾತು ವೆಚ್ಚಗಳು | 1000.00 | 300.00 |
| 5 | 0979 | 13. ಆರೋಗ್ಯ – ಸಾಮಾನ್ಯ | ಆಸ್ಪತ್ರೆ – ಔಷಧಾಲಯಗಳ ನಿರ್ವಹಣೆ– ದುರಸ್ಥಿ | 200.00 | 100.00 |
| 6 | 0462 | 17. ಕಾಮಗಾರಿ ಸಾರ್ವಜನಿಕ ಕಾಮಗಾರಿಗಳು | ಬೃ.ಬೆ.ಮ.ಪಾ ಕಟ್ಟಡಗಳ ನಿರ್ವಹಣೆ ಮತ್ತು ದುರಸ್ಥಿ | 200.00 | 100.00 |
| 7 | 0475 | 17. ಕಾಮಗಾರಿ ಸಾರ್ವಜನಿಕ ಕಾಮಗಾರಿಗಳು | ವಿದ್ಯಾ ಇಲಾಖೆಯ ಕಟ್ಟಡಗಳ ನಿರ್ವಹಣೆ ಮತ್ತು ದುರಸ್ಥಿ | 200.00 | 100.00 |
| 8 | 1237 | 17. ಕಾಮಗಾರಿ ಸಾರ್ವಜನಿಕ ಕಾಮಗಾರಿಗಳು | ಪ್ರಕೃತಿ ವಿಕೋಪದ ಕಾಮಗಾರಿಗಳು | 500.00 | 400.00 |
| 9 | 0099 | 19. ಕಾಮಗಾರಿ ಯೋಜನಾ ಶಾಖೆ | ಸಮಾಲೋಚನಾ ವೆಚ್ಚ (ಯೋಜನಾಡಳಿತ) | 100.00 | 100.00 |
| | | | | ಒಟ್ಟು ರೂ. | 1600.00 |

**ಮುಂದುವರೆದು, ಆಡಳಿತಾತ್ಮಕ ವೆಚ್ಚಗಳ ಹಾಗೂ ನಿರ್ವಹಣಾ ಕಾಮಗಾರಿಗಳಲ್ಲಿ ಮೀಸಲಿರಿಸಿದ ಅನುದಾನಗಳ ಪಿ.ಸಂಖ್ಯೆಗಳ ಅನುದಾನವನ್ನು ಹೊರತುಪಡಿಸಿ, ಉಳಿದ ಲೆಕ್ಕ ಶೀರ್ಷಿಕೆ ಹಾಗೂ ಇತರೆ ಲೆಕ್ಕ ಶೀರ್ಷಿಕೆಗಳಲ್ಲಿ ಲಭ್ಯವಿರುವ ಅನುದಾನವನ್ನು ಪೂಜ್ಯ ಮಹಾಪೌರರ ನಿಧಿ ಲೆಕ್ಕ ಶೀರ್ಷಿಕೆ ಪಿ.0190, ಪಿ.2434, ಪಿ.2415, ಪಿ.1924ಗೆ ಮರುಹೊಂದಾಣಿಕೆ/ ಪುನರ್‌ವಿನಿಯೋಗದ ಪರಿಶೀಲನೆ ಮತ್ತು ಆದೇಶಕ್ಕೆ ಮಂಡಿಸಿದೆ.**

(ರೂ.ಲಕ್ಷಗಳಲ್ಲಿ)

| ಕ್ರ ಸ | ಪಿ ಕೋಡ್/ ಪುಟ ಸಂಖ್ಯೆ | ಪ್ರಧಾನ ಶೀರ್ಷಿಕೆ | ಲೆಕ್ಕ ಶೀರ್ಷಿಕೆ | ಅನುದಾನದ ಮೊತ್ತ | ಕಾಮಗಾರಿ ಸಂಖ್ಯೆ ನೀಡಿರುವ/ ಹಂಚಿಕೆ ಮೊತ್ತ | ಉಳಿಕೆ ಮೊತ್ತ | ಮರು ಹೊಂದಾಣಿಕೆ ಮೊತ್ತ |
|---|---|---|---|---|---|---|---|
| 1 | **1924/ 145** | 19. ಕಾಮಗಾರಿ ಯೋಜನಾ ಶಾಖೆ | ರಸ್ತೆ ಮತ್ತು ಮೇಲ್ಸೇತುವೆ ನಿರ್ವಹಣೆ | **2000.00** | **227.50** | **1772.25** | **1500.00** |
| 2 | **2887/ 167** | 22. ಕಾಮಗಾರಿ ಸಂಚಾರಿ ಶಾಖೆ | 8 ವಲಯಗಳಲ್ಲಿ 200 ಜಂಕ್ಷನ್ ಅಭಿವೃದ್ಧಿಗೊಳಿಸುವುದು. | **1000.00** | **38.40** | **961.60** | **500.00** |
| 3 | 1732/159 | 20. ಕಾಮಗಾರಿ ಮೂಲಭೂತ ಸೌಕರ್ಯಗಳ ಶಾಖೆ | | **40000.00** | | | |
| | | ಪಿ1732 ಗೆ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನ | | **30000.00** | | | |
| | | | ಪಿ1732 ಒಟ್ಟು ಅನುದಾನ | **70000.00** | | | |
| | | ರಸ್ತೆ ಮೂಲಭೂತ ಸೌಕರ್ಯ ಕಾಮಗಾರಿಗಳ ಕಾರ್ಯಕ್ರಮದ ಅನುಮೋದಿತ ಮೊತ್ತ | | | | **56000.00** | |
| | | ಪಿ1732 ಅಡಿ ಉಳಿತಾಯವಾಗುವ ಅನುದಾನ | | | | | **14000.00** |
| | ಒಟ್ಟು ಮರುಹೊಂದಾಣಿಕೆ ಮೊತ್ತ | | | | | | **16000.00** |

**2013–14 ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ1732 ಅಡಿ ರೂ. 400.00 ಕೋಟಿ ಮೀಸಲಿರಿಸಿದ್ದು, ಸರ್ಕಾರದಿಂದ ರಸ್ತೆ ಮೂಲಭೂತ ಸೌಕರ್ಯದ ಕಾಮಗಾರಿಗಳಿಗೆ ಬಿಡುಗಡೆಯಾಗುವ ರೂ. 300.00 ಕೋಟಿಗಳ ಅನುದಾನವನ್ನು ಹಾಲಿ ಮೀಸಲಿಟ್ಟಿರುವ ರೂ. 400.00 ಕೋಟಿಗಳೊಂದಿಗೆ ಹೆಚ್ಚುವರಿಯಾಗಿ ಅಳವಡಿಸಿಕೊಂಡು ಒಟ್ಟಾರೆ ರೂ. 700.00 ಕೋಟಿಗಳನ್ನು ಮೀಸಲಿಡಿಸಿಕೊಳ್ಳಬೇಕಿದೆ. ರಸ್ತೆ ಮೂಲಭೂತ ಸೌಕರ್ಯದ ಕಾಮಗಾರಿಗಳಿಗಾಗಿ ರೂ. 560.00 ಕೋಟಿಗಳ ಕಾರ್ಯಕ್ರಮ ಅನುಮೋದನೆಯಾಗಿದ್ದು, ರೂ. 700.00 ಕೋಟಿಗಳಲ್ಲಿ ರೂ. 140.00 ಕೋಟಿ ಉಳಿತಾಯವಾಗಲಿದೆ.**

**ಲೆಕ್ಕ ಶೀರ್ಷಿಕೆ ಪಿ–2887 ಅಡಿ ರೂ. 1000.00 ಲಕ್ಷಗಳನ್ನು ಮೀಸಲಿರಿಸಿದ್ದು, ರೂ. 38.40 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದೆ. ರೂ. 961.60 ಲಕ್ಷಗಳು ಬಾಕಿ ಇದ್ದು, ಸದರಿ ಮೊತ್ತದಲ್ಲಿ ರೂ. 500.00 ಲಕ್ಷಗಳನ್ನು ಲೆಕ್ಕ ಶೀರ್ಷಿಕೆ ಪಿ–1924 ಅಡಿ ರೂ. 2000.00 ಲಕ್ಷಗಳನ್ನು ಮೀಸಲಿರಿಸಿದ್ದು ರೂ. 227.50 ಲಕ್ಷಗಳಿಗೆ ಜಾಬ್ ಸಂಖ್ಯೆ**

**ನೀಡಲಾಗಿದ್ದು, ರೂ. 1772.25 ಲಕ್ಷಗಳು ಬಾಕಿ ಇದ್ದು, ಸದರಿ ಮೊತ್ತದಲ್ಲಿ ರೂ. 1500.00 ಲಕ್ಷಗಳನ್ನು ಒಟ್ಟಾರೆ ರೂ. 2000.00 ಲಕ್ಷಗಳ ರಸ್ತೆ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ ಭರಿಸಿಕೊಳ್ಳಬೇಕಿದೆ.**

- **ಮೇಲ್ಕಂಡಂತೆ, ಪೂಜ್ಯ ಮಹಾಪೌರರು ಕೋರಿರುವ ವಿವಿಧ ಲೆಕ್ಕ ಶೀರ್ಷಿಕೆಗಳಿಂದ ರೂ. 160.00 ಕೋಟಿಗಳಲ್ಲಿ ಪುನರ್ ವಿನಿಯೋಗದ ಮೂಲಕ ಪೂಜ್ಯ ಮಹಾಪೌರರ ನಿಧಿ ಲೆಕ್ಕ ಶೀರ್ಷಿಕೆ ಪಿ.0190ಕ್ಕೆ ಹೆಚ್ಚುವರಿಯಾಗಿ ರೂ.24.00 ಕೋಟಿ, ಬೆಂಗಳೂರು ಅಭಿವೃದ್ಧಿ ನಿಧಿ ಲೆಕ್ಕ ಶೀರ್ಷಿಕೆ ಪಿ.2434ಕ್ಕೆ ರೂ. 96.00 ಕೋಟಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಲೆಕ್ಕ ಶೀರ್ಷಿಕೆ ಪಿ.2415ಗೆ ರೂ. 20.00 ಕೋಟಿಗಳನ್ನು, ಲೆಕ್ಕ ಶೀರ್ಷಿಕೆ ಪಿ–2887 ರಿಂದ ಪಿ–1924ಗೆ ರೂ. 5.00 ಕೋಟಿಗಳನ್ನು ಪುನರ್ ವಿನಿಯೋಗ/ಮರು ಹೊಂದಾಣಿಕೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಪರಿಗಣನೆ ಮತ್ತು ಆದೇಶಕ್ಕೆ ಮಂಡಿಸಿದೆ.**
- **ರಸ್ತೆ ಮೂಲಭೂತ ಸೌಕರ್ಯ ಕಾಮಗಾರಿಗಳ ಕಾರ್ಯಕ್ರಮ ಪಟ್ಟಿಯ ಒಟ್ಟು ಮೊತ್ತ ರೂ. 20.00 ಕೋಟಿಗಳನ್ನು ಶೀರ್ಷಿಕೆ ಪಿ–1924 ಅಡಿ ಕೈಗೊಳ್ಳಲು ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.**

**<u>ನಿರ್ಣಯ:–</u> ಆಯುಕ್ತರ ದಿನಾಂಕ:27–01–2014ರ ಟಿಪ್ಪಣಿಯನ್ನು ಭಾಗಶಃ ಮಾರ್ಪಡಿಸುತ್ತಾ, ಪೂಜ್ಯ ಮಹಾಪೌರರ ನಿಧಿ ಲೆಕ್ಕಶೀರ್ಷಿಕೆ ಪಿ–0190ಕ್ಕೆ ಹೆಚ್ಚುವರಿಯಾಗಿ ರೂ.44.00 ಕೋಟಿ, ಬೆಂಗಳೂರು ಅಭಿವೃದ್ಧಿ ನಿಧಿ ಲೆಕ್ಕ ಶೀರ್ಷಿಕೆ ಪಿ–2434ಕ್ಕೆ ರೂ.96.00 ಕೋಟಿ ಹಾಗೂ ಲೆಕ್ಕ ಶೀರ್ಷಿಕೆ ಪಿ–2887ರಿಂದ ಪಿ–1924ಕ್ಕೆ ರೂ.5–00ಕೋಟಿಗಳನ್ನು ಪುನರ್ ವಿನಿಯೋಗ/ಮರು ಹೊಂದಾಣಿಕೆ ಮಾಡಿಕೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.**

## ***<u>07]. ವಿಷಯದ ಸಂಖ್ಯೆ :–ತೆಆಸ್ಥಾಸ/85/2013–14</u>***

ವಿಶೇಷ ಆಯುಕ್ತರು (ಯೋಜನೆ) ರವರ ದಿ: 28.01.2014ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಶ್ರೀ ಎಂ.ಎ.ಪಾರ್ಥಸಾರಥಿ ರವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಇತರರು ಗಳ ಮೇಲೆ W.A.1498/08, ಮತ್ತು c/w 1499/2008 (L.B-B.M.P) ರಂತೆ ದಾವೆ ಹೂಡಿದ್ದು, ಸದರಿ ದಾವೆಗೆ ಸಂಬಂಧಿಸಿದಂತೆ ಮಾನ್ಯ ಉಚ್ಛ ನ್ಯಾಯಾಲಯವು ದಿನಾಂಕ:14/8/2012 ರಂದು ತೀರ್ಪನ್ನು ಪ್ರಕಟಿಸಿದ್ದು ,ಉಚ್ಛ ನ್ಯಾಯಾಲಯದ ತೀರ್ಪಿನಂತೆ ಸ್ಯಾಂಕಿ ಕೆರೆಯ ವಿವಾದಿತ ಸ್ಥಳದ ಗಡಿಯನ್ನು ಗುರ್ತಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಂಟಿ ಆಯುಕ್ತರು(ಆಸ್ತಿಗಳು) ರವರು ಭೂ ದಾಖಲೆಗಳ ಸಹಾಯಕ ನಿರ್ದೇಶಕರು ನಗರ ಮಾಪನ ತಂಡ–2, ಕೆ.ಆರ್.ವೃತ್ತ, ಬೆಂಗಳೂರು ರವರೊಂದಿಗೆ ಸ್ಯಾಂಕಿ ಕೆರೆಯ ಜಂಟಿ ಸರ್ವೆ ಕಾರ್ಯವನ್ನು ನಿರ್ವಹಿಸಿ ಕೆರೆಯ ನಕ್ಷೆಯ ಶುದ್ಧ ಪ್ರತಿಯನ್ನು ನೀಡಿದ್ದು,ಸದರಿ ನಕ್ಷೆಯನ್ವಯ ಕೆರೆಯ ವಿಸ್ತೀರ್ಣ 40 ಎಕರೆ 24 ಗುಂಟೆಯಿದ್ದು, 1 ಎಕರೆ 6 ಗುಂಟೆ ಒತ್ತುವರಿಯಿರುವುದಾಗಿ ತಿಳಿಸಿರುತ್ತಾರೆ.

ದಿನಾಂಕ:31/12/13 ರಂದು ಮಾನ್ಯ ಜಿಲ್ಲಾಧಿಕಾರಿಗಳು,ಬೆಂಗಳೂರು ನಗರ ಜಿಲ್ಲೆ,ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ಉಚ್ಛ ನ್ಯಾಯಾಲಯದ ಕೋರ್ಟ್ ಕಮಿಟಿಯ ಸಭೆಯಲ್ಲಿ ಸದರಿ ಕೆರೆಯ ಗಡಿಯ ನಿಗಧಿಪಡಿಸುವ ಬಗ್ಗೆ ಚರ್ಚೆಗೆ ಬಂದಿದ್ದು, ಉತ್ತರ ಭಾಗದಲ್ಲಿ ಗಡಿಯನ್ನು ಗುರುತಿಸಿ ಬೇಲಿಯನ್ನು ಹದಿನೈದು ದಿನಗಳಲ್ಲಿ ಅಳವಡಿಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ ಹಾಗೂ ಈ ಸಂಬಂಧ ತಹಶೀಲ್ದಾರರು ಉತ್ತರ ತಾಲ್ಲೂಕು ರವರು ದಿನಾಂಕ:02/01/2014 ರಂದು ಬಿಬಿಎಂಪಿಯ ಸಂಬಂಧಪಟ್ಟ ಅಭಿಯಂತರರೊಂದಿಗೆ ಸದರಿ ಟ್ಯಾಂಕ್‌ನ ಒತ್ತುವರಿ ಜಾಗವನ್ನು ಪರಿಶೀಲಿಸಿದ್ದು ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಪ್ರಕರಣ 94 ಮತ್ತು 39 ರಡಿ ಒತ್ತುವರಿಯನ್ನು ತೆರವುಗೊಳಿಸಲು ಸೂಕ್ತ ಕ್ರಮವನ್ನು ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.

ಆದುದರಿಂದ ತಹಶೀಲ್ದಾರರು ಉತ್ತರ ತಾಲ್ಲೂಕು ರವರು ನಿಗದಿಪಡಿಸಿದ ದಿನ ಬಿಬಿಎಂಪಿ ವತಿಯಿಂದ ಸ್ಯಾಂಕಿ ಟ್ಯಾಂಕ್‌ನ ಉತ್ತರ ಭಾಗದಲ್ಲಿ ನಿಗದಿಪಡಿಸುವ ಗಡಿಯಲ್ಲಿ ತಂತಿಬೇಲಿಯನ್ನು ಅಳವಡಿಸಬೇಕಾಗಿರುತ್ತದೆ ಹಾಗೂ

ಮುಂದೆ ಯಾವುದೇ ರೀತಿಯ ಒತ್ತುವರಿಯಾಗದಂತೆ ನೋಡಿಕೊಳ್ಳಬೇಕಾಗಿರುತ್ತದೆ.ಆದುದರಿಂದ ಉತ್ತರ ಭಾಗದಲ್ಲಿ ತಂತಿಬೇಲಿಯನ್ನು ಅಳವಡಿಸಲು ಕಾರ್ಯಪಾಲಕ ಅಭಿಯಂತರರು–2,ಕೆರೆಗಳು ವಿಭಾಗದಿಂದ 2013–14 ನೇ ಸಾಲಿನ ಲೋಕೋಪಯೋಗಿ ಇಲಾಖೆ ಬೆಂಗಳೂರು ವೃತ್ತದ ದರಸೂಚಿಯಂತೆ ರೂ–23,50,000=00(ರೂ ಇಪ್ಪತ್ತ ಮೂರು ಲಕ್ಷ ಐವತ್ತು ಸಾವಿರ ಮಾತ್ರ) ಗಳಿಗೆ ಅಂದಾಜುಪಟ್ಟಿಯನ್ನು ತಯಾರಿಸಿ ಸಲ್ಲಿಸಲಾಗಿರುತ್ತದೆ ಹಾಗೂ ಸದರಿ ಕಾಮಗಾರಿಯು ಅತೀ ಜರೂರಾಗಿರುವುದರಿಂದ ಈ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್ ಮೂಖಾಂತರ ಕೈಗೊಳ್ಳಲಾಗುವುದು.

ಮುಂದುವರೆಯುತ್ತ 2013–14ನೇ ಸಾಲಿನ ಬಿಬಿಎಂಪಿ ಆಯವ್ಯಯದಲ್ಲಿ ಸದರಿ ಕಾಮಗಾರಿಗಾಗಿ ಯಾವುದೇ ಅನುದಾನ ಮೀಸಲಿರಿಸಿರುವುದಿಲ್ಲ ಆದುದರಿಂದ ಸದರಿ ಕಾಮಗಾರಿಯನ್ನು ಕೈಗೊಳ್ಳಲು ತಗಲುವ ವೆಚ್ಚವನ್ನು 2013–14ನೇ ಸಾಲಿನ ಬಿಬಿಎಂಪಿ ಆಯವ್ಯಯದ ಅಡಿಯಲ್ಲಿ ಉಳಿಕೆಯಾದ ಯಾವುದೇ ಪಿ–ಕೋಡ್‌ನ ಮೊತ್ತವನ್ನು ಸದರಿ ಕಾಮಗಾರಿಗೆ ಅನುದಾನದ ಮರುಹೊಂದಾಣಿಕೆಯನ್ನು ಮಾಡಿಕೊಳ್ಳಲು ಕೋರಿ ತೆರಿಗೆ ಮತ್ತು ಅರ್ಥಿಕ ಸ್ಥಾಯಿ ಸಮಿತಿ ಅನುಮೋದನೆಗೆ ಪ್ರಸ್ತಾವನೆಯನ್ನು ಮಂಡಿಸಿರುವ ಟಿಪ್ಪಣಿ.

**ನಿರ್ಣಯ:– ವಿಶೇಷ ಆಯುಕ್ತರು (ಯೋಜನೆ) ರವರ ದಿ.28.01.2014ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

**(ಡಾ॥ ಶಿವಪ್ರಸಾದ್. ಎಂ.ಎಸ್)**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 11.02.2014 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| **ಶ್ರೀಯುತರುಗಳಾದ :** | |
| ಡಾ॥ಎಂ.ಎಸ್.ಶಿವಪ್ರಸಾದ್ – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ, |
| ಎಂ.ಇ.ಪಿಳ್ಳಪ್ಪ – ಸದಸ್ಯರು | ಮುಖ್ಯ ಲೆಕ್ಕಾಧಿಕಾರಿ, |
| ವೀಣಾ ನಾಗರಾಜ್ – ಸದಸ್ಯರು | ಮುಖ್ಯ ಲೆಕ್ಕಪರಿಶೋಧಕರು. |
| ಗಂಗಾಧರ ಹೆಚ್.ಎನ್ – ಸದಸ್ಯರು | --- |
| ಬಿ.ಎಸ್.ಆನಂದ್ – ಸದಸ್ಯರು | --- |
| ಕೃಷ್ಣ.ವಿ – ಸದಸ್ಯರು | --- |
| ಸಂಪತ್‌ರಾಜ್.ಆರ್ – ಸದಸ್ಯರು | --- |
| ಗೋವಿಂದರಾಜು.ಎನ್ – ಸದಸ್ಯರು | --- |
| ಉದಯ್‌ಕುಮಾರ್.ಆರ್ – ಸದಸ್ಯರು | --- |
| ಸರಳ – ಸದಸ್ಯರು | --- |
| ಸಿ.ಎಸ್.ರಾಧಾಕೃಷ್ಣ – ಸದಸ್ಯರು | --- |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

***01]. ವಿಷಯದ ಸಂಖ್ಯೆ :-ತೆಆಸ್ಥಾಸ/87/2013-14***

ಕರ್ನಾಟಕ ಮುನ್ಸಿಪಲ್ ಕಾಯ್ದೆ 1976ರ ಸೆಕ್ಷನ್ 166,167,168 ಮತ್ತು 169ರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2013-14ನೇ ಸಾಲಿನ ಪರಿಷ್ಕೃತ ಆಯವ್ಯಯ ಹಾಗೂ 2014-15ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆ ಮುಂದೆ ಮಂಡಿಸತಕ್ಕದಾಗಿರುತ್ತದೆ.

ಅದರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2013-14ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳು ಕರಡು ಪ್ರತಿ ಹಾಗೂ 2014-15ನೇ ಸಾಲಿನ ಆಯವ್ಯಯ ಅಂದಾಜುಗಳ ಕರಡು ಪ್ರತಿಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಹಾಗೂ ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:30-01-2014ರ ಟಿಪ್ಪಣಿ ಬಗ್ಗೆ.

***ನಿರ್ಣಯ :*** **ಮಾನ್ಯ ಆಯುಕ್ತರವರು ದಿನಾಂಕ 30-01-2014ರ ಟಿಪ್ಪಣಿಯೊಂದಿಗೆ ಕರ್ನಾಟಕ ಮುನಿಸಿಪಲ್ ಕಾಯಿದೆ 1976ರ ಸೆಕ್ಷನ್ 166ರ ಪ್ರಕಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ2013-14ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳು ಕರಡು ಪ್ರತಿ ಹಾಗೂ 2014-15ನೇ ಸಾಲಿನ ಆಯವ್ಯಯ ಅಂದಾಜುಗಳ ಕರಡು ಪ್ರತಿಯನ್ನು ನಿಯಮಾವಳಿಗಳ ಅನ್ವಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿದ್ದು; ಸದರಿ ಕರಡು ಆಯವ್ಯಯದ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಂಬಂಧಪಟ್ಟ ಎಲ್ಲಾ ಇಲಾಖಾ ಮುಖ್ಯಸ್ಥರುಗಳೊಂದಿಗೆ ಸಮಿತಿಯು ಕೂಲಂಕುಶವಾಗಿ ಚರ್ಚಿಸಲಾಯಿತು. ಅಲ್ಲದೇ ಪೂಜ್ಯ ಮಹಾಪೌರರು, ಮಾನ್ಯ ಉಪ ಮಹಾಪೌರರು, ಎಲ್ಲಾ ಪಕ್ಷಗಳ ನಾಯಕರುಗಳು ಮಾನ್ಯ ಆಯುಕ್ತರವರ ಸಲಹೆಗಳನ್ನು ಪಡೆದುಕೊಂಡು, ಸಮಿತಿಯು ಕರಡು ಪ್ರತಿಯಲ್ಲಿ ಅಗತ್ಯ ತಿದ್ದುಪಡಿಗಳನ್ನು ಮಾಡಿ ಅನುಮೋದಿಸಿದೆ. ಅದರಂತೆ ಮಹಾನಗರ ಪಾಲಿಕೆಯ ಸಭೆಯ ಮುಂದೆ ಪರಿಶೀಲನೆಗೆ ಹಾಗೂ ಅನುಮೋದನೆಗಾಗಿ ಮಂಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

**(ಡಾ॥ ಶಿವಪ್ರಸಾದ್. ಎಂ.ಎಸ್)**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**